**ದಿನಾಂಕಃ 17.03.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು – ವಾದಿ ಪರ ವಕೀಲರಿಂದ**

ದಾವಾ 1 ರಿಂದ 6 ನಮ್ಮ ತಾಯಿಗೆ ಸೇರಿದ ಆಸ್ತಿಯಾಗಿರುತ್ತದೆ. ನಮ್ಮ ತಾಯಿಗೆ ಹೇಗೆ ಬಂತೆಂದು ನನಗೆ ಗೊತ್ತಿಲ್ಲ. ನಿಡಿ–4 ನೋಂದಾಯಿತ ದಾಖಲೆ ಇರುತ್ತದೆ. ಅದು ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ. ನಾನು ಬಿಎ ಪದವೀಧರ. ನಾನು ಕಾಮಗೆರೆಯಲ್ಲಿ ಮೆಡಿಕಲ್ ಶಾಫ್ ಇಟ್ಟುಕೊಂಡಿದ್ದೆ ಎಂದರೆ ಸರಿ. ನನ್ನ ಮೆಡಿಕಲ್ ಶಾಫ್‌ನ ಹೆಸರು ನನಗೆ ಗೊತ್ತಿರುವುದಿಲ್ಲ. ನಾನು ಯಾವ ವರ್ಷದಿಂದ ಯಾವ ವರ್ಷದವರೆಗೆ ಮೆಡಿಕಲ್ ಶಾಫ್ ಇಟ್ಟುಕೊಂಡಿದ್ದೆ ಎಂದು ನನಗೆ ನೆನಪಿಲ್ಲ. ನಾನು ಕಾಮಗೆರೆಯಲ್ಲಿ ಮೆಡಿಕಲ್ ಶಾಫ್ ಇಟ್ಟುಕೊಂಡಿದ್ದ ಸಮಯದಲ್ಲಿ ಗೌಡಗೆರೆಶೆಟ್ಟಿದೊಡ್ಡಿಯಲ್ಲಿ ವಾಸವಿದ್ದೆ. ಆ ಸಮಯದಲ್ಲಿ ನನಗೆ ಮದುವೆಯಾಗಿರುವುದಿಲ್ಲ. ಆಗ ನಾನು ನನ್ನ ತಂದೆ ತಾಯಿ ಜೊತೆ ವಾಸವಾಗಿದ್ದೆ. ನಾನು 2010 ರಲ್ಲಿ ನಾನು ಬೆಂಗಳೂರಿನಲ್ಲಿ ಮೆಡಿಕಲ್ ಶಾಫ್ ಇಟ್ಟುಕೊಂಡಿದ್ದೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಬರುತ್ತದೆ. ನಾನು ದಿನಾಂಕಃ 19.06.2023 ರಂದು ನನ್ನ ಪ್ರತಿವಾದ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿ. ನನ್ನ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿರುತ್ತವೆ. ನಿಡಿ–4 ರಿಂದ ನಿಡಿ–9ನ್ನು ನಾನು ಓದಿ ತಿಳಿದುಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಿದ್ದಶೆಟ್ಟಿಯವರು ದಾವಾ ಐಟಂ 6 ಪಿತ್ರಾರ್ಜಿತ ಸ್ವತ್ತು ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 6 ಒಟ್ಟು ಕುಟುಂಬದ ಆಸ್ತಿ ಎಂದು ಹೇಳುವುದು ಸರಿಯಲ್ಲ. ಪಿತ್ರಾರ್ಜಿತ ಸ್ವತ್ತಿನಲ್ಲಿ 2ನೇ ಪ್ರತಿವಾದಿಗೂ ಕೂಡ ಭಾಗ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಿತ್ರಾರ್ಜಿತ ಸ್ವತ್ತಿನಲ್ಲಿ ನನಗೆ ಮಾತ್ರ ಹಕ್ಕಿಲ್ಲ ಎಲ್ಲರಿಗೂ ಹಕ್ಕಿದೆ ಎಂದು ಹೇಳಿದ್ದೇನೆ ಎಂದರೆ ಸುಳ್ಳು. ದಾವಾ ಐಟಂ ನಂ. 9 ಸಿದ್ದಶೆಟ್ಟಿಯವರ ತಂದೆ ಬಸವಶೆಟ್ಟಿಗೆ ಸೇರಿದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ.

ನನ್ನ ತಾತ ಸಿದ್ದಶೆಟ್ಟಿಗೆ ಒಟ್ಟು 9 ಮಕ್ಕಳು ಎಂದರೆ ಸರಿ. ನನ್ನ ತಾಯಿ ಸೇರಿದಂತೆ ಮೂರು ಹೆಣ್ಣು ಆರು ಗಂಡು ಮಕ್ಕಳು ಎಂದರೆ ಸರಿ. ನಿಡಿ–4 ರಲ್ಲಿ ನನ್ನ ತಾಯಿಯ ಸಹಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ–4 ರಲ್ಲಿ ನನ್ನ ಚಿಕ್ಕಮ್ಮ ವಾದಿ ಮತ್ತು ದೊಡ್ಡಮ್ಮ ಸಾವಿತ್ರಮ್ಮನ ಸಹಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅವರುಗಳ ಒಪ್ಪಿಗೆ ಸಮ್ಮತಿ ಸಹಿ ಕೂಡ ನಿಡಿ–4 ರಲ್ಲಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಸಹಿ ನಿಡಿ–4 ರಲ್ಲಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ–4ಕ್ಕೆ ಸಂಬಂದಪಿಪಟ್ಟಂತೆ ವಾದಿ ಮತ್ತು ಪ್ರತಿವಾದಿಗಳ ಪ್ರತ್ಯೇಕ ಒಪ್ಪಿಗೆ ಸಮ್ಮತಿ ಪತ್ರ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ–4 ರಲ್ಲಿ ಯಾವುದೇ ಚೆಕ್ಕು ಬಂದಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ದಾವಾ ಐಟಂ ನಂ. 6 ರ ಎಲ್ಲಾ ವಿಚಾರಗಳು ಗೊತ್ತಿರುತ್ತದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ದಿನಾಂಕಃ14.09.2021 ರ ನಿಡಿ–5 ರಂತೆ ಆಧಾರ ತೀರುವಳಿ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ನಾನು ದಿನಾಂಕಃ 07.08.2010 ರ ಆಧಾರ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನನ್ನ ತಾಯಿಯವರು ಜಮೀನನ್ನು ಆಧಾರವಾಗಿಟ್ಟಿದ್ದಾರೆ. ನಿಡಿ–5 ರಲ್ಲಿ ನನ್ನ ತಾಯಿಯ ಸಹಿ ಮತ್ತು ನನ್ನ ಸಹಿ ಇರುತ್ತದೆ. ನಾನು ಮತ್ತು ನನ್ನ ತಾಯಿ ದಿನಾಂಕಃ 07.08.2010 ರಂದು ಎಸ್ ಬಿ ಎಂ ಬ್ಯಾಂಕಿನಿಂದ ದಾವಾ ಐಟಂ ನಂ. 6 ನ್ನು ಆಧಾರ ಪಡಿಸಿ ಒಂದು ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದೇವೆ ಎಂದರೆ ಸರಿ. ನಿಡಿ–5 ನೋಂದಣಿಯಾಗಿದೆ ಎಂದರೆ ಸರಿ. ವಾದಿ ದಿನಾಂಕಃ 24.09.2016 ರಲ್ಲಿ ದಾವೆ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ದಿನಾಂಕಃ 17.01.2022 ನನ್ನ ಹೆಸರಿಗೆ ದಾನಪತ್ರವಾಗಿದೆ ಎಂದರೆ ಸರಿ. ದಾವಾ ಐಟಂ ನಂ. 6 ನನ್ನ ಹೆಸರಿಗೆ ದಾವಾ ನಡೆಯುತ್ತಿರುವಾಗ ನೋಂದಣಿ ಮಾಡಿದರೆ ವಾದಿಗಳಿಗೆ ಅದರ ಮೇಲೆ ಹಕ್ಕು ಬರುವುದಿಲ್ಲ ಎಂದು ನನ್ನ ಹೆಸರಿಗೆ ನೋಂದಣಿ ಮಾಡಿಸಿರುತ್ತೇನೆ ಎಂದರೆ ಸುಳ್ಳು. ದಾವಾ ಸಲ್ಲಿಸಿದ ಸಮಯದಲ್ಲಿ ನನ್ನ ತಾಯಿ ನನ್ನ ಜೊತೆ ಇದ್ದರು. ನನಗೆ ಆವಾಗಲೂ ದಾವಾ ಸಲ್ಲಿಸಿರುವ ವಿಚಾರ ಗೊತ್ತಾಗಿರುವುದಿಲ್ಲ. ನಾನು ಮತ್ತು ನನ್ನ ತಾಯಿ ಎಲ್ಲರೂ

ಬೆಂಗಳೂರಿನಲ್ಲಿ ವಾಸವಿದ್ದೇವೆ ಎಂದರೆ ಸರಿ. ನಿಡಿ–5 ರಲ್ಲಿ ದಾವಾ ಐಟಂ ನಂ. 6ರ ಚೆಕ್ಕು ಬಂದಿ ನಮೂದು ಮಾಡಿಲ್ಲ ಎಂದರೆ ಸರಿ. ನಿಡಿ–5 ರ ಪ್ರಕಾರ ದಾವಾ ಐಟಂ ನಂ. 6 ರ ಉತ್ತರಕ್ಕೆ ಜಯಂತ್ ರವರ ಜಮೀನು ಇದೆ ಎಂದು ನಮೂದಿಸಿದೆ ಎಂದರೆ ಸರಿ. ನಿಡಿ–6 ರ ದಾನ ಪತ್ರದ ಸ್ವತ್ತಿನ ಉತ್ತರಕ್ಕೆ ಸಿದ್ದಶೆಟ್ಟಿಯವರ ಜಮೀನಿದೆ ಎಂದು ನಮೂದು ಮಾಡಿದ್ದಾರೆ ಎಂದರೆ ಸರಿ. ನಿಡಿ–6 ರ ಸದರಿ ಸಿದ್ದಶೆಟ್ಟಿಯವರು ನನ್ನ ತಾತ ಅಲ್ಲ ಮತ್ತೆ ಯಾರು ಸಿದ್ದಶೆಟ್ಟಿ ಎಂದರೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ–6 ರ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ. 6 ರ ಚೆಕ್ಕು ಬಂದಿ ಹೇಳಲಾಗುವುದಿಲ್ಲ. 1ನೇ ಪ್ರತಿವಾದಿ ಸಾವಿತ್ರಮ್ಮ ನನ್ನ ದೊಡ್ಡಮ್ಮ ಎಂದರೆ ಸರಿ. ಅವರು ದಾವಾ ನಡೆಯುವ ಸಮಯದಲ್ಲಿ 16.09.2010 ರಂದು ಮೃತಪಟ್ಟಿದ್ದಾರೆ ಎಂದರೆ ಸರಿ.

**ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.